**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 94/2020**

**ಚಾ.ಸಾಃ 11, ಫ್ರಾ.ಸಾಃ 6**

| | |
|---|---|
| ಸಾಕ್ಷಿದಾರನ ಹೆಸರು | ದೀಪಕ ಶೇಟ್ |
| ತಂದೆಯ ಹೆಸರು | ಚಂದ್ರಹಾಸ ಶೇಟ್ |
| ವಯಸ್ಸು | 40 ವರ್ಷಗಳು |
| ಉದ್ಯೋಗ | ಅಕ್ಕಸಾಲಿಗ |
| ವಾಸ್ತವ್ಯ | ಮಹಾಲಕ್ಷ್ಮೀ ಜ್ಯುವೆಲರ್ಸ, ಬಜಾರ್ ರಸ್ತೆ, ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 05-08-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಹೊನ್ನಾವರ ಪಟ್ಟಣದ ಬಜಾರ ರಸ್ತೆಯಲ್ಲಿ ಮಹಾಲಕ್ಷ್ಮೀ ಜ್ಯುವೆಲರ್ಸ ಎನ್ನುವ ಹೆಸರಿನ ನಮ್ಮ ಅಂಗಡಿಯು ಕಳೆದ 8 ವರ್ಷಗಳಿಂದ ಇರುತ್ತದೆ. ಬಂಗಾರದ ಆಭರಣಗಳನ್ನು ಪರಿಶೀಲಿಸುವ ಹಾಗೂ ಮೌಲ್ಯಮಾಪನ ಮಾಡುವುದರಲ್ಲಿ ನನಗೆ ಸಾಕಷ್ಟು ಪರಿಣಿತಿ ಮತ್ತು ಅನುಭವ ಇರುತ್ತದೆ.

ದಿನಾಂಕ 05-08-2020 ರಂದು ಹೊನ್ನಾವರ ಪೋಲೀಸ್ ಠಾಣೆಯ ನಿರೀಕ್ಷಕರು ಆಭರಣಗಳ ಪರಿಶೀಲನೆ ಮತ್ತು ಮೌಲ್ಯಮಾಪನಕ್ಕಾಗಿ ನನ್ನನ್ನು ಹೊನ್ನಾವರ ಠಾಣೆಗೆ ಕರೆಸಿದ್ದರು. ನಾನು ಠಾಣೆಗೆ ಹೋದಾಗ ಅನಿಲ್ ಶೇಟ್ ಹಾಗೂ ಇನ್ನಿಬ್ಬರು ಅಕ್ಕಸಾಲಿಗರು ಇದ್ದರು. ಆಭರಣವನ್ನು ಕಳ್ಳತನ ಮಾಡಿದ್ದರು ಎಂದು ಹೇಳಲಾದ ಒಬ್ಬ ಮಹಿಳೆ ಇದ್ದರು.

ವೃತ್ತ ನಿರೀಕ್ಷಕರ ಚೇಂಬರ್ ನಲ್ಲಿ ಮೂರು ಬಂಡಲ್‌ಗಳಲ್ಲಿ ಇದ್ದ ಆಭರಣಗಳನ್ನು ನಾನು ಪರೀಕ್ಷೆ ಮಾಡಿ, ತೂಕ ಮಾಡಿ, ಮೌಲ್ಯ ಮಾಪನ ಮಾಡಿರುತ್ತೇನೆ. ಸದರಿ ಆಭರಣಗಳಿಗೆ ಸಂಬಂಧಿಸಿದಂತೆ ನಾನು ರಸೀದಿ ನೀಡಿರುತ್ತೇನೆ. ರಸೀದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ರಸೀದಿಯನ್ನು ಗುರುತಿಸಿದ್ದು ಅದನ್ನು ನಿಪಿ-8 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಾನು ತೂಕ ಮಾಡಿದ ಬಂಡಲ್‌ಗಳ ಪೈಕಿ ಒಂದರಲ್ಲಿ 151 ಗ್ರಾಂ ಕ್ಕಿಂತ ಸ್ವಲ್ಪ ಹೆಚ್ಚು, ಇನ್ನೊಂದರಲ್ಲಿ 83 ಗ್ರಾಂ ಕ್ಕಿಂತ ಸ್ವಲ್ಪ ಹೆಚ್ಚು ಹಾಗೂ ಮತ್ತೊಂದರಲ್ಲಿ 73 ಗ್ರಾಂ ಕ್ಕಿಂತ ಹೆಚ್ಚು ತೂಕದ ಆಭರಣಗಳು ಇದ್ದವು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಯಾವ ಯಾವ ಬಂಡಲ್‌ಗಳಲ್ಲಿ ಯಾವ ಯಾವ ಮಾದರಿಯ ಎಷ್ಟು ಎಷ್ಟು ತೂಕದ ಹಾಗೂ ಎಷ್ಟು ಆಭರಣಗಳು ಇದ್ದವು ಎನ್ನುವುದನ್ನು ನಿಖರವಾಗಿ ಹೇಳಲಾಗುವುದಿಲ್ಲ. ಸದರಿ ಆಭರಣಗಳ ಪೈಕಿ ಕೆಲವು ಸಿದ್ಧ ಆಭರಣಗಳಾಗಿದ್ದವು ಹಾಗೂ ಕೆಲವನ್ನು ಕೈಕೆಲಸದಿಂದ ತಯಾರಿಸಲಾಗಿತ್ತು. ನಾನು ಠಾಣೆಗೆ

ಹೋಗಿಲ್ಲ, ಯಾವುದೇ ಆಭರಣಗಳನ್ನು ಪರಿಶೀಲಿಸಿಲ್ಲ, ತೂಕ ಮಾಡಿಲ್ಲ ಮತ್ತು ಮೌಲ್ಯ ಮಾಪನ ಮಾಡಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**